**CW : 6**
PW : 5

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1067/2025

ಸಾಕ್ಷಿದಾರರ ಹೆಸರು : ಇಸ್ಮಾಯಿಲ್

ತಂದೆಯ ಹೆಸರು : ಸಾಬು

ಪ್ರಾಯ : 42 ವರ್ಷ

ಉದ್ಯೋಗ ಕೂಲಿ

ವಾಸಸ್ಥಳ : ಕಟ್ಟತ್ತಾರು ಕೆಯ್ಯೂರು

ದಿನಾಂಕಃ **02.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ.2 ದಾಖಲೆ ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2ಸಿ ಎಂದು ಗುರುತಿಸಲಾಯಿತು. ನಿಪಿ.2ಕ್ಕೆ ನಾನು ದಿ.02.06.2025 ರಂದು ರುಕಯಾ ಎನ್ನುವವರ ಮನೆಯ ಅಂಗಳದಲ್ಲಿ ಸಹಿ ಮಾಡಿದ್ದೇನೆ. ರುಕಯಾರವರ ಮನೆ ಪಾತುಂಜದಲ್ಲಿರುತ್ತದೆ. ಅಲ್ಲಿಗೆ ಪೋಲಿಸರಿಗೆ ಮಹಜರು ಮಾಡುವ ಸಲುವಾಗಿ ಬಂದಿದ್ದರು. ಸ್ಥಳದಲ್ಲಿ ಹನೀಫರವರ ಮೇಲೆ ಗಲಾಟೆ ಮಾಡಲಾಗಿತ್ತು. ಪೋಲಿಸರಿಗೆ ಸ್ಥಳವನ್ನು ಚಾಸಾ1ರವರು ತೋರಿಸಿದರು. ನನ್ನ ಸಂಗಡ ಚಾಸಾ5 ಸಹ ಮಹಜರಿಗೆ ಸಹಿ ಮಾಡಿದರು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಪಿ ಆರ್ ವಕೀಲರಿಂದಃ

ಚಾಸಾ1ರವರ ಹತ್ತಿತರ ನಾನು ಮರದ ಕೆಲಸ ಮಾಡುತ್ತೇನೆ. ಚಾಸಾ5 ಸಹ ಚಾಸಾ1ರವರ ಹತ್ತಿರ ಮರದ ಕೆಲಸ ಮಾಡುತ್ತಾರೆ ಎಂದರ ಸರಿಯಲ ಅವರು ನಮ್ಮ ಊರಿನವರು ಮಾತ್ರ. ಒಮ್ಮೊಮ್ಮೆ ನಾನು ಮತ್ತು ಚಾಸಾ5 ಒಟ್ಟಿಗೆ ಕೆಲಸ ಮಾಡುತ್ತೇವೆ. ಕೈಕಂಬದ ಹತ್ತಿರ ಅಂಗಡಿಯಲ್ಲಿ ನಾನು ಇದ್ದಾಗ ಪೋಲಿಸರು ಅಲ್ಲಿಗೆ ಬಂದ ಮಹಜರ ಮಾಡುವ ಸಲುವಾಗಿ ನನ್ನನ್ನು ಕರೆದರು. ನನ್ನನ್ನು ಮ.1.00 ಗಂಟೇಗೆ ಕರೆದುಕೊಂಡು ಹೋದರು. ಆ ಸಮಯದಲ್ಲಿ ನನಗೆ ಲಿಖಿತವಾಗಿ ನೋಟಿಸ ಕೊಟ್ಟಿದ್ದಾರೆ. ನಾನನಿರುವ ಸ್ಥಳದಿಂದ ಪಾತುಂಜಕ್ಕೆಸುಮಾರು 1 ವರೆ ಕಿ ಮಿ ದೂರ ಇದೆ. ರುಕಯಾರವರ ಮನೆ ಮುಖ್ಯ ರಸ್ತೆಯಿಂದ ಅರ್ಧ ಕಿ ಮಿ ಒಳಗೆ ಇದೆ. ರುಕಯಾರವರ ಮನೆ ಮುಖ್ಯ ರಸ್ತೆಯಿಂದ ಹೇಗೆ ಹೋದರು ಎಂದು ಗೊತ್ತಿಲ್ಲ. ಆ ದಿನ ಜಯಶ್ರೀ ಎನ್ನುವ ಪೋಲಿಸರು ಸ್ಥಳಕ್ಕೆ ಬಂದಿದ್ದರು.

**CW : 6**
PW : 5

ನಾನು ಸ್ಥಳಕ್ಕೆ ಹೋದಾಗ ಸಾರ್ವಜನಿಕರು ಯಾರು ಇರಲಿಲ್ಲ. ಮಹಜರನ್ನು ಪೋಲಿಸರು ಪೆನ್ನಿನಿಂದ ಬರೆದುಕೊಂಡಿದ್ದಾರೆ. ಮಹಜರನಲ್ಲಿ ಪೋಲಿಸರು ಏನೆಲ್ಲಾ ಬರೆದರು ಎಂದು ನನಗೆ ಗೊತ್ತಿಲ್ಲ. ಮಹಜರ ಜಾಗದ ಚಕಬಂದಿ ಹೇಳಬಲ್ಲೆ. ತಕ್ಷೀರು ನಡೆದ ಸ್ಥಳ ರುಕಯಾರವರ ಮನೆಯ ಅಂಗಳವಾಗಿರುತ್ತದೆ.

ನನಗೆ ಠಾಣೆಗೆ ಬರಬೇಕೆಂದು ಪೋಲಿಸರು ಕರೆದಿಲ್ಲ. ನಾನು ಯಾವುದೇ ಮಹಜರಿಗೆ ಸಹಿ ಮಾಡಿಲ್ಲ ಅದನ್ನು ಪೋಲಿಸರು ಪೊ. ಠಾಣೆಯಲ್ಲಿ ತಯಾರಿಸಿದ್ದಾರೆ ಎಂದರೆ ಸುಳ್ಳು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ವಿಚಾರಗಳು ಸುಳ್ಳು. ಚಾಸಾ1ರವರು ನನ್ನ ಧಣಿಯಾಗಿರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ2ರ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಹಸೈನಾರರವರ ಮನೆಯವರಾಗಲಿ ಅಥವಾ ರುಕಯಾರವರ ಮನೆಯವರಾಗಲಿ ಕರೆದಿಲ್ಲ. ಸ್ಥಳದಲ್ಲಿ ಪೋಲಿಸರು ಫೋಟೊ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿತಿಳಿಸಿರುವಂತೆ ಯಾವದೇ ಮಹಜರನ್ನು ನನ್ನ ಸಮಕ್ಷಮ ನಾನು ಹೇಳಿದ ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.